ಕೋಟಿ ರೂಪಾಯಿಗಳಷ್ಟು ವ್ಯತ್ಯಾಸವನ್ನು ಸೋರಿಕೆಯಿಂದ ತಡೆಹಿಡಿದು ಆದಾಯವನ್ನು ತಂದಿದ್ದೇವೆ ಎನ್ನುವಂಥ ಮಾತುಗಳನ್ನು ಹೇಳಿದ್ದಾರೆ. ವಿವರಗಳನ್ನು ಪಡೆದು ಕೊಡಿಸುವಂಥ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ : ಕೇಂದ್ರ ಸರ್ಕಾರ ಹೆಚ್ಚಿಗೆ ಕೊಟ್ಟಿರುವುದನ್ನು ಇದಕ್ಕೆ ಸೇರಿಸಬೇಡಿ. ದಯವಿಟ್ಟು ನಾನು ಕೇಳಿರುವ ಉಪ ಪ್ರಶ್ನೆಗಳಿಗೆ ಉತ್ತರವನ್ನು ತರಿಸಿಕೊಡಬೇಕು.

ಗಿಡಗಳನ್ನು ನೆಟ್ಟು ಅಭಿವೃದ್ಧಿಪಡಿಸುವುದು

237 (1347) ಶ್ರೀ ಸಿಂಧೂರ ಬಿ. ರಾಜಶೇಖರ (ಶಿಗ್ಗಾಂವ್) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್–ಸವಣೂರ

ತಾಲ್ಲೂಕುಗಳಲ್ಲಿ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣಾ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಸರ್ಕಾರ ಎಷ್ಟು ಅನುದಾನ ಬಿಡುಗಡೆಗೊಳಿಸುತ್ತದೆ;

ಆ) ಕರ್ನಾಟಕ ರಾಜ್ಯದಲ್ಲಿ ಗಿಡಗಳನ್ನು ಮಳೆಗಾಲದಲ್ಲಿ ನೆಡುವುದನ್ನು ಬಿಟ್ಟು, ಬೇಸಿಗೆ ಕಾಲದಲ್ಲಿ ಗಿಡ ನೆಟ್ಟು ಅವುಗಳ ಆರೈಕೆ ಇಲ್ಲದೇ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಆದಷ್ಟು ಮಳೆಗಾಲದಲ್ಲಿಯೇ ಗಿಡಗಳನ್ನು ನೆಟ್ಟು (ಪ್ಲಾಂಟೇಶನ್) ಅಭಿವೃದ್ಧಿಪಡಿಸಿ ಬೇಸಿಗೆ ಕಾಲದಲ್ಲಿ ನೆಟ್ಟಿರುವ ಗಿಡಗಳ ಆರೈಕೆಗೆ ತಂತಿ ಬೇಲಿಗಳನ್ನು ನಿರ್ಮಿಸಿ ಸಂರಕ್ಷಣೆ ಮಾಡಿ ಅಭಿವೃದ್ಧಿಪಡಿಸಲು ಹೆಚ್ಚಿನ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಸಿ.ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಜೆಬಿಐಸಿ ನೆರವಿನ ಕರ್ನಾಟಕ ಸ್ವಸ್ತಿಗೆ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆಯಲ್ಲಿ ಮಾರ್ಗಸೂಚಿ ಮತ್ತು Criterin ಪ್ರಕಾರ ಪ್ರಸಕ್ತ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳ ಅನುಷ್ಠಾನಕ್ಕಾಗಿ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಅರಣ್ಯ ವಿಭಾಗಗಳ ಮೂಲಕ ಬಿಡುಗಡೆಗೊಳಿಸಲಾದ ಅನುದಾನದ ವಿವರ ಈ ಕೆಳಕಂಡಂತಿದೆ:–

(ರೂ. ಲಕ್ಷಗಳಲ್ಲಿ)

ವಿಭಾಗ	ಬಿಡುಗಡೆಗೊಳಿಸಲಾದ ಅನುದಾನ		ಒಟ್ಟು
	ಶಿಗ್ಗಾಂವ್ ತಾಲ್ಲೂಕು	ಸವಣೂರು ತಾಲ್ಲೂಕು	
ಧಾರವಾಡ (ಪ್ರಾದೇಶಿಕ)	86.104	–	86.104
ಹಾವೇರಿ (ಸಾಮಾಜಿಕ ಅರಣ್ಯ)	1.14	–	1.14
ಒಟ್ಟು	**87.244**	–	**87.244**

ಆ) ಅರಣ್ಯ ಇಲಾಖೆಯಿಂದ ಬೇಸಿಗೆ ಕಾಲದಲ್ಲಿ ಗಿಡಗಳನ್ನು ನೆಡುವ ಪದ್ಧತಿ ಇರುವುದಿಲ್ಲ. ಆದ್ದರಿಂದ ಬೇಸಿಗೆಯಲ್ಲಿ ನೆಟ್ಟ ಗಿಡಗಳು ಆರೈಕೆಯಿಲ್ಲದ ಹಾಳಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮಳೆಗಾಲದಲ್ಲಿ ಕೈಗೊಳ್ಳಬೇಕಾದ ನೆಡುತೋಪು ಅಭಿವೃದ್ಧಿ ಕಾರ್ಯಕ್ರಮ ಮತ್ತು ಬೇಸಿಗೆ ಕಾಲದಲ್ಲಿ ನಿರ್ವಹಿಸಬೇಕಾದಂತಹ ಅರಣ್ಯೀಕರಣದ ಕೆಲಸಗಳಿಗೆ ಯೋಜನಾ ಅಂದಾಜನ್ನು ಆಯಾ ವರ್ಷದಲ್ಲಿ ತಯಾರಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಸಿಂಧೂರ ಬಿ. ರಾಜಶೇಖರ : ಮಾನ್ಯ ಛೇರ್ಮನ್‌ರೆ, ಉತ್ತರವನ್ನು ಒದಗಿಸಿದ್ದಾರೆ. ಈ ಅನುದಾನ ಹಂಚಿಕೆಯಲ್ಲಿ ಶಿಗ್ಗಾಂವ್ ತಾಲ್ಲೂಕಿಗೆ ಮಾತ್ರ ಅನುದಾನ ಬರುತ್ತದೆ. ಆದರೆ ಸವಣೂರು ತಾಲ್ಲೂಕಿಗೆ ಯಾವ ಅನುದಾನ ಬಂದಿಲ್ಲ. ಆದುದರಿಂದ ಅಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ಮಾನ್ಯ ಸಚಿವರು ನೋಡಬೇಕೆಂದು ಹೇಳಬಯಸುತ್ತೇನೆ. ಸವಣೂರು ತಾಲ್ಲೂಕಿಗೆ ಅನುದಾನವಿಲ್ಲ. ಶಿಗ್ಗಾಂವ್ ತಾಲ್ಲೂಕಿನ ಅನುದಾನದಲ್ಲಿಯೇ ಇದಕ್ಕೂ ಮ್ಯಾನೇಜ್ ಮಾಡಬೇಕಾಗಿರುತ್ತದೆ. ಆ ಕಾರಣದಿಂದ ಸವಣೂರು ತಾಲ್ಲೂಕಿಗೆ ಪ್ರತ್ಯೇಕವಾಗಿ ಅನುದಾನವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಇನ್ನು ಸ್ಥಳಿಕವಾದಂತಹ ತಳಿಗಳನ್ನು ಬಿಟ್ಟು ಕೇವಲ ಗುಲ್ ಮೊಹರ್ ತಳಿಯ ಸಸಿಗಳನ್ನು ಮಾತ್ರ ನಮ್ಮಲ್ಲಿ ನೆಡುತ್ತಿದ್ದಾರೆ. ಮಳೆ ಗಾಳಿ ಬಂದಾಗ ಆ ಗಿಡಗಳು ಬೀಳುತ್ತವೆ ಮತ್ತು ಈ

ಗಿಡಗಳು ನೀರು ಇಂಗಿಸಿಕೊಳ್ಳುವುದಿಲ್ಲ. ಇಂಥ ಗಿಡಗಳನ್ನು ನಮ್ಮ ಪ್ರದೇಶದಲ್ಲಿ ನೆಟ್ಟು ಅಂಕಿ ಸಂಖ್ಯೆಗಳನ್ನು ತೋರಿಸುತ್ತಿದ್ದಾರೆಯೇ ವಿನಃ ಉಪಯುಕ್ತವಾದಂಥ ಗಿಡಗಳನ್ನು ನೆಡುವುದಿಲ್ಲ. ನಮ್ಮ ಭಾಗದಲ್ಲಿ ಬೇವು, ಬಸವಿ, ಅತ್ತಿ, ಮಾವು, ಹುಣಸೆ ಇಂಥ ತಳಿಗಳನ್ನು ಬೆಳೆಸಿ ನೀರು ಇಂಗುವ ಕೆಲಸ ಮತ್ತು ನೆರಳು ಕೊಡುವ ಎರಡೂ ಕೆಲಸಗಳನ್ನು ಮಾಡಿಕೊಡ ಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಚನ್ನಿಗಪ್ಪ (ಅರಣ್ಯ ಸಚಿವರು) : ಮಾನ್ಯ ಛೇರ್ಮನ್‌ರೆ, ಮಾನ್ಯ ಸದಸ್ಯರು ಎರಡೂ ತಾಲ್ಲೂಕುಗಳಿಗೂ ಬರುತ್ತದೆ ಎಂದು ಹೇಳುತ್ತಾರೆ. ಜೆ.ಬಿ.ಐ.ಸಿ. ಸ್ಕೀಂನಿಂದ ನಾನು ಈಗಾಗಲೇ ಅವರ ತಾಲ್ಲೂಕಿನಲ್ಲಿ 87.244 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಸ್ಕೀಂ ಸವಣೂರು ತಾಲ್ಲೂಕಿಗೆ ಅಪ್ಲೈ ಆಗುವುದಿಲ್ಲ. ಅದಕ್ಕೋಸ್ಕರ ಸಮಾಜ ಕಲ್ಯಾಣ ಇಲಾಖೆಯಿಂದ ಬರತಕ್ಕಂಥ ಹಣವನ್ನು ಬಯಲು ಪ್ರದೇಶವೇನಿದೆ, ಅದಕ್ಕೆ ಮಾತ್ರ ಖರ್ಚು ಮಾಡಲಾಗುತ್ತಿದೆ. ಮಿಕ್ಕಂತೆ ನಾವು ಜೆ.ಬಿ.ಐ.ಸಿ. ಸ್ಕೀಂನಿಂದ ಖರ್ಚು ಮಾಡುತ್ತಿದ್ದೇವೆ. ಇನ್ನು ಮಾನ್ಯ ಸದಸ್ಯರು ಸಸಿಗಳನ್ನು ಹಾಕಿ ಬೇಲಿ ಕಟ್ಟಬೇಕೆಂದು ಹೇಳಿದ್ದಾರೆ. ಸತ್ಯ ಅದು. ಎಲ್ಲಾ ಸಸಿಗಳಿಗೂ ಬೇಲಿ ಕಟ್ಟುವ ಬದಲಾಗಿ ಅವುಗಳಿಗೆ ಈಚಲುಗರಿಯನ್ನು ಕಟ್ಟುವುದು, ಇಂಥವನ್ನೆಲ್ಲಾ ರಸ್ತೆ ಬದಿಯಲ್ಲಿ ಬಯಲು ಪ್ರದೇಶದಲ್ಲಿ ಮಾಡುತ್ತಿದ್ದೇವೆ. ಈಗ ತಮ್ಮ ತಾಲ್ಲೂಕಿನದ್ದನ್ನು ಹೇಳಿದ್ದೀರಿ. ತಮ್ಮ ತಾಲ್ಲೂಕಿಗೆ ಈಗಾಗಲೇ 87.244 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಇನ್ನೂ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಮೊನ್ನೆ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿದ್ದೇವೆ. ನಮ್ಮ ಅಧಿಕಾರಿಗಳು ಈಗಾಗಲೇ ಎರಡು ಬಾರಿ ನಿಮ್ಮ ತಾಲ್ಲೂಕನ್ನು ಸೂಪರ್ ವೈಸ್ ಮಾಡಿದ್ದಾರೆ. ಮತ್ತೊಂದು ಸಾರಿ ತಾವೇನು ಹೇಳಿದ್ದೀರಲ್ಲ, ಅದೇ ರೀತಿ ನೀವು ಹೇಳಿದಂತೆ ಅರಣ್ಯವನ್ನು ಬೆಳೆಸತಕ್ಕಂಥದ್ದು ಮತ್ತು ತಂತಿ ಬೇಲಿ ಎಲ್ಲೆಲ್ಲಿ ಹಾಕಬೇಕಾದ ಅವಶ್ಯಕತೆ ಇದೆಯೋ ಆ ಕೆಲಸವನ್ನು ಮಾಡುತ್ತೇವೆ.

ಛೇರ್ಮನ್ : ಮಾನ್ಯ ಸಚಿವರು ಯಾವ ರೀತಿಯ ಗಿಡಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದೀರಿ?

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಹಿಂದಿನ ಕಾಲದಲ್ಲಿ ಬಹುವಾರ್ಷಿಕ ಮರಗಳಾದ, ಆಲ, ಹಿಪ್ಪೆ, ಅರಳಿ ಹೀಗೆ ಬೇಕಾದಷ್ಟು ಇದ್ದವು. ಅದು ತಮಗೆ ಗೊತ್ತಿದೆ. ಆದರೆ ಈಗ ಹೊಸ ಪದ್ಧತಿಗಳನ್ನು ಅಳವಡಿಸಕೊಳ್ಳಬೇಕು ಎಂದು ಬೇಗ ಬೆಳೆಯುವಂತಹ ಸಸಿಗಳನ್ನು ಇವತ್ತು

ಅರಣ್ಯ ಇಲಾಖೆಯವರು ಪ್ರಯತ್ನ ಮಾಡಿದ್ದರೆ, ಆದರೆ ಮಾನ್ಯ ಶಾಸಕರು, ಅದು ಬೇಕಿಲ್ಲ, ಬಹುವಾರ್ಷಿಕವಾಗಿ ಬರುವಂತಹ ಮರಗಳಾದ ಹಿಪ್ಪೆ, ನೇರಳೆ, ಹಲಸು, ಆಲದ ಮರ, ಗೋಣಿ ಮರ ಆಗಬಹುದು ಇಂತವುಗಳನ್ನು ನೀವು ಹಾಕಿ, ಅವು 200 ರಿಂದ 300 ವರ್ಷ ಇರುತ್ತದೆಂದು ಏನು ಸಲಹೆಗಳನ್ನು ಕೊಟ್ಟಿದ್ದಾರೆ, ಅದಕ್ಕೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳ ಜೊತೆ ಈಗಾಗಲೇ ಮೂರು ಸಭೆಗಳನ್ನು ಮಾಡಿದ್ದೇವೆ. ಈ ವರ್ಷ ಹೆಚ್ಚಿಗೆ ಬಹುವಾರ್ಷಿಕ ಒಳ್ಳೆಯ ಸಲಹೆ. ಏಕೆಂದರೆ ಎಂಟತ್ತು ವರ್ಷಕ್ಕೆ ಬೆಳೆ ಬಂದು ಬುಡದಲ್ಲಿರುವಂತಹ ಮಣ್ಣಿನ ಸಾರವನ್ನು ಹೀರಿ ಕೊನೆಗೆ ಅವುಗಳು ಮಳೆ ಗಾಳಿಗೆ ಬೀಳುತ್ತವೆ. ಅಂತಹ ಸಸಿಗಳನ್ನು ಹಾಕದೇ ಬಹುವಾರ್ಷಿಕ ಸಸಿಗಳನ್ನು ಬಹುವಾರ್ಷಿಕವಾಗಿ ಬೆಳೆಯುವಂತಹ ಸಸಿಗಳನ್ನು ಹಾಕುತ್ತಿದ್ದೇವೆ.

ಛೇರ್ಮನ್ : Bio fuel ಗೆ ಸಂಬಂಧಪಟ್ಟ ಹಾಗೆ ಯೋಜನೆಗಳು ಏನಾದರೂ ಇದೆಯಾ?

ಶ್ರೀ ಸಿ.ಚೆನ್ನಿಗಪ್ಪ : ಅದರಲ್ಲಿ ಅದೂ ಕೂಡ ಸೇರಿಸಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಮ್ಮ ಕಾಡಿನಲ್ಲಿ ಇರುವ ಕೋತಿಗಳು ಊರಿಗೆ ಬಂದಿವೆ, ದಯವಿಟ್ಟು ಕಾಡಿನಲ್ಲಿ ಹಣ್ಣಿನ ಗಿಡಗಳನ್ನು ಜಾಸ್ತಿ ಹಾಕಿ. ಏಕೆಂದರೆ ಅವುಗಳ ಆಹಾರವನ್ನು ನಾವು ಕಸಿದುಕೊಂಡು ಬಿಟ್ಟಿದ್ದೇವೆ. ನಮ್ಮ ಮಲೆನಾಡಿನ ಹಲಸಿನ ಮರ, ವಾಟೆ ಮರ, ನೇರಳೆ ಮರ ಬೇಕಾದಷ್ಟು ಇತ್ತು. ಅವೆಲ್ಲಾ ನಾಶವಾಗಿ ಹೋಗಿಬಿಟ್ಟಿದೆ. ತಾವು ಆ ಮರಗಳನ್ನು ಬೆಳೆಸಿದರೆ ಮಂಗಗಳು ಊರಿಗೆ ಬಂದು ಫಸಲು ತಿನ್ನುವುದು ಹಾಗೂ ಮನೆಗಳಿಗೆ ಕಾಟ ಕೊಡುವುದು ತಪ್ಪುತ್ತದೆ. ಆ ಪ್ರಾಣಿಗಳು ಅಲ್ಲಲ್ಲೆ ಆಹಾರವನ್ನು ಉಪಯೋಗಿಸಿಕೊಂಡು ಬದುಕುತ್ತವೆ. ಅರಣ್ಯ ಇಲಾಖೆಯ ಸಚಿವರು ಇದನ್ನು ಹೇಳಬೇಕು.

ಶ್ರೀ ಸಿ.ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಶಾಸಕರು ಚೆನ್ನಾಗಿ ಹೇಳಿದರು. ಅವರ ತಾಲ್ಲೂಕಿನಲ್ಲಿ tour ಮಾಡಿದ್ದೇವೆ. ಆ ಕಾಡು ಪ್ರದೇಶದಲ್ಲಿ ನೇರಳೆ ಮರ, ಹಲಸಿನ ಮರ ಹಾಗೂ ವಾಟೆ ಮರಗಳು ಎಲ್ಲಾ ಇದ್ದವು. ಅಲ್ಲಿ ಹಿಂದೆ ಇದ್ದ ಮರಗಳನ್ನು ಕಡಿದುಕೊಂಡು ಹೋದರು, ಕೆಲವು ನಾಶವಾದವು. ಮತ್ತೆ ಅಲ್ಲಿ ಹಾಕಿಲ್ಲ. ಮೊನ್ನೆ ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಕುಳಿತುಕೊಂಡು, ಇವತ್ತು ಒಳ್ಳೆಯ ಹಲಸಿನ

ಬೀಜಗಳನ್ನು ತರಬೇಕು. ಇಲ್ಲೆ ಇರುವಂತಹ ಬೀಜಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ. ಉತ್ತಮವಾದ ಬೀಜಗಳನ್ನು ಯಾವುದಿದೆ ಎಂದು ಕಂಡು ಹಿಡಿದು ಅವುಗಳನ್ನು exhibition ಮಾಡಿಸಿ, ಯಾರು ಒಳ್ಳೆಯ ಹಲಸಿನ ಹಣ್ಣುಗಳನ್ನು ಬೆಳೆಯುತ್ತಾರೆ, ಅಂತಹವರಿಗೆ ಇಲಾಖೆಯಿಂದ ಈ ವರ್ಷ Prize ಕೊಡಬೇಕು ಎಂದು ಮಾಡಿದ್ದೇವೆ. ಮಾನ್ಯ ಶಾಸಕರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಆ ಸಲಹೆಯನ್ನು ಸರ್ಕಾರ ತೆಗೆದುಕೊಂಡು ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಅದರ ಬಗ್ಗೆ ಚಿಂತನೆ ಮಾಡುತ್ತೇವೆ. ಈ ವರ್ಷದಲ್ಲಿ ಹಲಸಿನ ಮರಗಳು ಎಷ್ಟು ಸಿಗುತ್ತವೆ, ಅವುಗಳನ್ನು ಅರ್ಧ ಬೆಲೆಯಲ್ಲಿ ಕೊಡುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಇಬ್ಬರಿಗೂ ಕಾಗದ ಬರೆದು permission ತೆಗೆದುಕೊಂಡಿದ್ದೇವೆ. ಹಣ್ಣಿನ ಬಹುವಾರ್ಷಿಕ ಸಸಿಗಳನ್ನು ಯಾರೂ ಬೆಳೆಯುತ್ತಾರೆ, ಅದನ್ನು ಅರ್ಧ ಬೆಲೆಗೆ ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ರೈತರಿಗೆ ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಇಲಾಖೆಯಿಂದ supply ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ಫೀರ್ಮನ್ : ಜಟ್ರೋಪ ಬೆಳೆ ಯಶಸ್ವಿಯಾಗಿದೆಯಾ? ವಿಫಲವಾಗಿದೆಯಾ?

ಶ್ರೀ ಸಿ.ಚೆನ್ನಿಗಪ್ಪ : ಜಟ್ರೋಪ ಮರಗಳು ಬೇಗ ಬೆಳೆದು ಬೇಗ ಸಾಯುವಂತಹ ಮರಗಳು. ಅವುಗಳು ಭೂಮಿಯ ಸಾರವನ್ನು ತಿಂದು ಬಿಡುತ್ತವೆ. ನಮ್ಮ ರಾಜ್ಯಕ್ಕೆ Jatropa is not a feasible tree. ಅದಕ್ಕೆ ನಾವು ನಮ್ಮ ರಾಜ್ಯದಲ್ಲಿ ಇರಬಾರದು seize ಮಾಡಬೇಕೆಂದು ಅದಕ್ಕೂ ಕೂಡ ಚಿಂತನೆಯಾಗಿದೆ. ಮಾನ್ಯ ಶಾಸಕರ ಮೀಟಿಂಗ್ ಮಾಡಿದಾಗ ಜಟ್ರೋಪ ಗಿಡಗಳನ್ನು ಎಲ್ಲಿಯೂ ಹಾಕಬೇಡಿ ಎನ್ನುವ ಮಾತನ್ನು ಹೇಳಿದೆ.

ಫೀರ್ಮನ್ : ತಮಿಳುನಾಡಿನಲ್ಲಿ ಅದು ವಿಫಲವಾಗಿದೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಾನು ನಿಮ್ಮ ಇಲಾಖೆ ಬಗ್ಗೆ ಎರಡು ಗಂಟೆ ಮಾತನಾಡಿದೆನು. ಅದಕ್ಕೆ ತಾವು ಬಂದು ಉತ್ತರ ಕೊಡುತ್ತೀರಿ ಎಂದು ಮಾಡಿದೆವು. ಮಾನ್ಯ ಚೆಲುವರಾಯ ಸ್ವಾಮಿಯವರು ಇಲ್ಲಿ ನಾನು ಉತ್ತರ ಕೊಡಬೇಕು ಎಂದು ಕೇಳಿಕೊಂಡು ಉತ್ತರ ಕೊಟ್ಟರು. ನಿಮ್ಮ ಇಲಾಖೆ ಬಹಳ ಮಹತ್ವದ ಇಲಾಖೆ. ನೀವು ನಮಗೆ ಕೊಟ್ಟಿರುವ ಹಣವನ್ನು ಸರಿಯಾಗಿ ಖರ್ಚು ಮಾಡಿಲ್ಲ. ಹಣವನ್ನು

ಹಾಗೇ ಉಳಿಸಿದ್ದೀರಿ. ನಿಮ್ಮ ಇಲಾಖೆಗೆ ಸಾವಿರ ಕೋಟಿ ರೂಪಾಯಿ ಕೊಡಿ ಎಂದು ಹೇಳಿದೆ. ನೀವು ಇಲ್ಲಿ ಬಂದು ಉತ್ತರ ಕೊಡುತ್ತೀರಿ ಎಂದು ಹೇಳಿದೆ. ಆದರೆ ನೀವು ಬರಲಿಲ್ಲ. ಉತ್ತರ ಕೊಡಲಿಲ್ಲ.

ಶ್ರೀ ಸಿ.ಚನ್ನಿಗಪ್ಪ : ಮಾನ್ಯ ಹಿರಿಯ ಶಾಸಕರು ಏನು ಹೇಳಿದ್ದಾರೆ, ನಮ್ಮ ಇಲಾಖೆಯಲ್ಲಿ ಡಿಸೆಂಬರ್‌ವರಗೆ ಆಗಿರುವಂತಹ expenditure ಬಗ್ಗೆ ಮಾತ್ರ ಕೊಟ್ಟಿದ್ದು, ಮಾರ್ಚ್‌ವರೆಗೆ ಆಗಿರುವುದನ್ನು ಕೊಟ್ಟಿರಲಿಲ್ಲ. ನಾನು ಮೊನ್ನೆ ನೋಡಿದಾಗ 98% ಹಣ ನಮ್ಮ ಇಲಾಖೆಯಲ್ಲಿ ಖರ್ಚಾಗಿದೆ. ತಾವು ಹೇಳಿದ ವಿಚಾರದ ಬಗ್ಗೆ ನಾನು ನೋಡಿದೆನು. ಮತ್ತೆ ನಾವು ರಾತ್ರಿ ಮೀಟಿಂಗ್ ಕರೆದಿದ್ದು, ರಾತ್ರಿ 8.00 ಗಂಟೆಯವರೆಗೆ ಮೀಟಿಂಗ್ ನಡೆಯಿತು.

ಶ್ರೀ ಎಸ್.ಎಸ್.ಪಾಟೀಲ್ : ನೀವು ಬಂದು ನಿಮ್ಮ ಇಲಾಖೆ ಬಗ್ಗೆ ಉತ್ತರ ಕೊಡುವುದರ ಮೂಲಕ ಬೆಳಕು ಚೆಲ್ಲಬೇಕಾಗುತ್ತಿತ್ತು. ಅದಕ್ಕೆ ಮಾತನಾಡಿದ್ದು. ಇಲ್ಲವೆಂದರೆ ಮುಂದೆ ಇಷ್ಟು ಖರ್ಚು ಮಾಡಿ, ಏನೇನು ಮಾಡಿ ಎಂದು ಹೇಳುತ್ತಿದ್ದೆವು. ನಾನು ನಿಮ್ಮ ಇಲಾಖೆಗೆ ಒಂದು ಸಾವಿರ ಕೋಟಿ ರೂಪಾಯಿ ಇಡಿ ಎಂದು ಹೇಳಿದ್ದೆ. ಅದರ ಬಗ್ಗೆ ಉಪ ಪ್ರಶ್ನೆಯನ್ನು ಕೇಳಲಿಲ್ಲ. ಇಲ್ಲಿ ಮಾನ್ಯ ಯಡಿಯೂರಪ್ಪನವರನ್ನು ಕೇಳುತ್ತಿದ್ದೆನು. ನೀವು ಅರಣ್ಯಕ್ಕೆ ಒತ್ತು ಕೊಡಬೇ ಹೋದರೆ ಈ ಎಲ್ಲಾ ಯೋಜನೆಗಾಗಿ ಹಾಳಾಗಿ ಹೋಗುತ್ತವೆ. ನಿಮ್ಮವರು ಇದ್ದರೆ ತಾನೆ ಪೂರ್ತಿ ಖರ್ಚು ಮಾಡುವುದು. ನೀವು ಗಿಡಗಳನ್ನು ಹಾಕಿದ್ದೀರಿ, ಅದರಲ್ಲಿ ಎಷ್ಟು ಗಿಡಗಳನ್ನು ಹಾಕಿದ್ದೀರಿ ಎಷ್ಟು ಗಿಡಗಳು ಉಳಿದವು ಎನ್ನುವುದರ ಬಗ್ಗೆ ಲೆಕ್ಕ ಇಲ್ಲ. ನೀವು ಸುಮ್ಮನೆ ಹಾಗೇ ಹೇಳಿಕೊಳ್ಳುತ್ತಾ ಹೋಗುವುದು.

ಶ್ರೀ ಹೆಚ್.ಡಿ.ಬಸವರಾಜ್ : ಮಾನ್ಯ ಸದಸ್ಯರು ಬೆಳಕು ಚೆಲ್ಲಲಿಲ್ಲವೆಂದು ಹೇಳಿದರು, ಈಗ ಕತ್ತಲೆಯಲ್ಲಿ ಇತ್ತಾ? ಬೆಳಕು ಚೆಲ್ಲಿದ್ದೀರಿ. ತಾವು ಚೆಲ್ಲಿದ್ದೀರಿ, ತಮ್ಮ ಹಿರಿಯ ಮಂತ್ರಿಗಳು ಕೂಡ ಚೆಲ್ಲಿದ್ದಾರೆ. ಬಜೆಟ್ ಕೂಡ ಪಾಸಾಗಿದೆ. ಈಗ ಮತ್ತೆ ಅದನ್ನೇ ವಿಶ್ಲೇಷಣೆ ಮಾಡುವುದೇ?

ಶ್ರೀ ಸಿ.ರಾಜಶೇಖರ ಸಿಂಧೂರ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಬೇಗ ಬೆಳೆಯುವಂತಹ ಗುಲ್‌ಮೊಹರ್ ಗಿಡ ಬೆಳೆಯುವುದನ್ನು ಬಂದ್ ಮಾಡುತ್ತೇವೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಅದೇ ರೀತಿ ಬಹುಪಯೋಗಿ ಬೇವಿಗೆ ಬಹಳ ಮಹತ್ವ ಕೊಡಬೇಕಾಗಿದೆ. ರೈತನಿಗೆ ಬಹಳ ಉಪಯುಕ್ತವಾದಂತಹ ಬೇವು ನಮ್ಮ ಪ್ರದೇಶದಲ್ಲಿ ಬಹಳ ಚೆನ್ನಾಗಿ ಬೆಳೆದಿದೆ. ಅದಕ್ಕೆ ಹೆಚ್ಚಿನ ಒತ್ತು ಕೊಟ್ಟು ಬೇವು ಬೆಳೆಸಬೇಕು. ಕಾಡು ಉಳಿಸಿ ನಾಡು

ಬೆಳೆಸಿ ಎಂದು ಹೇಳುತ್ತಾರೆ. ನಮ್ಮ ಪ್ರದೇಶದಲ್ಲಿ ನವಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಮಳೆ ನಿಂತು ಹೋಗಿ ಬಿಡುತ್ತದೆ. ಆಮೇಲೆ ಏಪ್ರಿಲ್ ಮತ್ತು ಮೇ ವರೆಗೂ ಅಡ್ಡ ಮಳೆಯಾಗುವುದಿಲ್ಲ. ಆದುದರಿಂದ ಐದಾರು ತಿಂಗಳು ಆ ಗಿಡಗಳ ಸಂರಕ್ಷಣೆಗಾಗಿ ನೀರಿನ ಟ್ಯಾಂಕರ್ ಮೂಲಕವಾಗಿ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಸಸಿಗಳನ್ನು ನೆಟ್ಟಮೇಲೆ ಅರಣ್ಯವನ್ನು ಕಾಪಾಡಬೇಕು ಎನ್ನುವ ದೃಷ್ಟಿಯಿಂದ JBSC scheme ನಿಂದ ತಾವು ಹೇಳಿದ ಹಾಗೆ ಸಸಿಗಳಿಗೆ ಬೇಸಿಗೆ ಕಾಲದಲ್ಲಿ ನೀರನ್ನು ಹಾಕುವುದರ ಮುಖಾಂತರ ಕಾಪಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೂ ಕೂಡ ಹಣವನ್ನು ಖರ್ಚು ಮಾಡುತ್ತಿದ್ದೇವೆ. ತಮ್ಮ ಸಲಹೆಯಂತೆ ಆ ಕೆಲಸವನ್ನು ಮಾಡುತ್ತೇವೆ.

ಛೇರ್ಮನ್ : ಮಾನ್ಯ ಬಸವರಾಜ ರಾಯರೆಡ್ಡಿಯವರ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ಹೋಗಿದೆ. ಇದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಬಸವರಾಜ ರಾಯರೆಡ್ಡಿ : ನಾಳೆ ಉತ್ತರ ಕೊಡುತ್ತಾರ?

ಛೇರ್ಮನ್ : ಕೊಡುತ್ತಾರೆ. ಈಗ ಮಾನ್ಯ ಜೀವಿಜಯ ಪರವಾಗಿ ಮಾನ್ಯ ಕೆ.ಜಿ.ಬೋಪಯ್ಯ ಪ್ರಶ್ನೆಯನ್ನು ಕೇಳಿ.

ಕಾಡಾನೆಗಳ ಹಾವಳಿ

1089 ಶ್ರೀ ಜೀವಿಜಯ ಬಿ.ಎ.(ಸೋಮವಾರಪೇಟೆ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನ ಅರಣ್ಯದಲ್ಲಿ ಎಷ್ಟು ಆನೆಗಳಿವೆ?

ಆ) 2004 ರಿಂದ 2007 ರವರೆಗೆ ಆನೆಗಳ ಹಾವಳಿಯಿಂದ ಸತ್ತವರ ಸಂಖ್ಯೆ ಎಷ್ಟು ಮತ್ತು ಇದರಿಂದ ಅಂಗವಿಕಲರಾದವರ ಸಂಖ್ಯೆ ಎಷ್ಟು?

ಇ) 2004 ರಿಂದ ಇಲ್ಲಿಯವರೆಗೆ ಆನೆ ನಿರೋಧಕ ಕಂದಕಗಳಿಗೆ ಮಂಜೂರಾದ ಹಣ ಎಷ್ಟು?

ಶ್ರೀ ಸಿ.ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :